

ಕಾಶ್ಮೀರಿ ಬಳೆಗಳು ಈಗ ಟ್ರೆಂಡಿಂಗ್‌ನಲ್ಲಿವೆ. ವಿವಿಧ ವಿನ್ಯಾಸದ, ಬಣ್ಣಗಳ ಬಳೆಗಳು ಹೆಣ್ಣುಮಕ್ಕಳ ಮನಸೆಳೆಯುತ್ತಿವೆ. ಕೈಗಳ ಸಿಂಗಾರ ಹೆಚ್ಚಿಸಲು ಮಹಿಳೆಯರೂ ಫ್ಯಾಷನಬಲ್ ಬಳೆಗಳ ಬೆನ್ನು ಬಿದ್ದಿದ್ದಾರೆ.



# ಎದೆ ಝಲ್ ಅಂತಿದೆ, ಬಳೆ ಘಲ್ ಅಂತಿದೆ...!



■ ಆಶಾ ಎಸ್. ಕುಲಕರ್ಣಿ

ಬಳೆ ತೊಡುವ ಶಾಸ್ತ್ರ, ಬಳೆ ತೊಟ್ಟುಕೊಳ್ಳುವುದು, ಬಳೆಯಲ್ಲೂ ಫ್ಯಾಷನ್, ಬಳೆಗಾರ, ಚೆನ್ನದ, ಗಾಜಿನ ಬಳೆಯ ಸ್ವರೂಪ... ಎಲ್ಲವೂ ಹೆಣ್ಣುಮಕ್ಕಳ ಸುತ್ತಲೇ ಗಿರಕಿ ಹೊಡೆಯುವ ಸಂಗತಿಗಳು. ಬಳೆ ಎಂದರೆ ಅದು ಹೆಣ್ಣುಮಕ್ಕಳ ಸೊತ್ತು. ಅಲಂಕಾರಕ್ಕೆ ಬಳೆ ಬೇಕು, ಸಂಪ್ರದಾಯಕ್ಕೂ ಬೇಕು, ಫ್ಯಾಷನ್‌ಗೂ ಬೇಕು. ಒಟ್ಟಿನಲ್ಲಿ ಬಳೆ ಎಂದರೆ ಅದು ನಾರಿಯರ ಸೌಂದರ್ಯದ ಪ್ರತೀಕ.

ರಂಗು ರಂಗಿನ ಘಲ್ ಘಲ್ ಎಂದು ಸದ್ದು ಮಾಡುವ ಬಳೆಗಳೆಂದರೆ ಯಾರಿಗೆ ಇಷ್ಟವಾಗಲ್ಲ ಹೇಳಿ? ಹೆಣ್ಣು ಮಕ್ಕಳ ಕೈಗಳ ಸಿಂಗಾರವನ್ನು ಹೆಚ್ಚಿಸಲು ಬಳೆಗಳ ಪಾತ್ರ ಬಹಳ ಮುಖ್ಯ. ಹಿಂದೂ ಸಂಪ್ರದಾಯದಲ್ಲಿ ಮಹಿಳೆಯರ ಸೌಭಾಗ್ಯ ಮತ್ತು ಮುತ್ತೈದೆತನದ ಸಂಕೇತವಾಗಿವೆ ಈ ಬಳೆಗಳು. ಹಿಂದಿನ ಕಾಲದಿಂದಲೂ ಮನೆಯಲ್ಲಿ ಯಾವುದೇ ಶುಭಕಾರ್ಯಗಳು ಪ್ರಾರಂಭವಾಗುವುದು ಬಳೆ ಶಾಸ್ತ್ರದಿಂದಲೇ. ರಂಗು ರಂಗಿನ ಗಾಜಿನ ಬಳೆಗಳೆಂದರೆ ಮಹಿಳೆಯರಿಗೆ ಎಲ್ಲಿಲ್ಲದ ಪ್ರೀತಿ, ಅಕ್ಕರೆ. ಇದರ ಜೊತೆಗೆ ಸಂಪ್ರದಾಯದಂತೆ ಬಳೆ ತೊಡಿಸುವ ಕಾರ್ಯಕ್ರಮ, ಅಲ್ಲದೆ ಮನೆಯ ಮುಂದೆ ಬಳೆಗಾರರು ತಮ್ಮ ಜೋಳಿಗೆಯಲ್ಲಿ ವಿವಿಧ ರೀತಿಯ ಗಾಜಿನ ಬಳೆಗಳನ್ನು ಹೊತ್ತು ತಂದು ಹಬ್ಬ, ಹರಿದಿನ ಇನ್ನಿತರ ಸಮಾರಂಭಗಳಲ್ಲಿ ಬಳೆ ತೊಡಿಸಿ ಹೋಗುತ್ತಿದ್ದರು. ಹೆಣ್ಣು ಮಕ್ಕಳು ಕೈತುಂಬಾ ಗಾಜಿನ ಬಳೆಗಳನ್ನು ತೊಟ್ಟುಕೊಂಡು ಸಂಭ್ರಮಪಡುತ್ತಿದ್ದರು. ಹಾಗೆಯೇ ಒಬ್ಬ ಹೆಣ್ಣು ಮಗಳು ಕೈತುಂಬಾ ಬಳೆ, ಮುಡಿ ತುಂಬಾ ಹೂವು, ಕಾಲಲ್ಲಿ ಗೆಜ್ಜೆ, ಹಣೆಯ ತುಂಬಾ ಕುಂಕುಮವಿಟ್ಟುಕೊಂಡು ಬಂದರೆ ಎಷ್ಟು ಲಕ್ಷಣವಾಗಿ ಕಾಣುತ್ತಿದ್ದಾಳೆ ಎಂದು ಹೇಳುವ ಕಾಲವಿತ್ತು.

ಈಗೀಗ ಬಳೆಗಳೂ ಬದಲಾಗುತ್ತಿದೆ, ಇನ್ನೂ ವೈವಿಧ್ಯದ ಬಳೆಗಳು ಬಂದಿವೆ. ಚಿನ್ನ, ಬೆಳ್ಳಿ, ಮುತ್ತಿನ ಬಳೆಗಳು, ಬ್ಲಾಕ್ ಮೆಟಲ್, ವೈಟ್ ಮೆಟಲ್, ಮರದಿಂದ ತಯಾರಿಸಿದ